**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಸ್ಪೆಶಲ್ (ಎನ್.ಡಿ.ಪಿ.ಎಸ್.)ಕೇಸ್ ನಂ.08/2021**

**ಪಿಡಬ್ಲ್ಯೂ-09(ಸಿಡಬ್ಲ್ಯೂ-15 )**

ಸಾಕ್ಷಿದಾರರ ಹೆಸರು : ಕಲ್ಲಪ್ಪ ಪಾಂಡ್ರೆ

ತಂದೆ/ಗಂಡನ ಹೆಸರು: ಕಾಶಿರಾಮ

ವಯಸ್ಸು : 67 ವರ್ಷ

ಉದ್ಯೋಗ : ನಿವೃತ್ತ ಎಎಸ್ಐ

ವಾಸಸ್ಥಳ : ಇಂಡಿ, ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 18/02/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು 2014 ರಿಂದ 2018 ರವರೆಗೆ ಚಡಚಣ ಪೋಲಿಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 02.03.2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ, ರಾತ್ರಿ 10.45 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಅಪರಾಧ ಸಂಖ್ಯೆ: 49/2018 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.09 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.09(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಚಾಸಾ-1 ರವರು ದೂರಿನ

ಜೊತೆ ಸ್ಥಳದಲ್ಲಿ ಜರುಗಿಸಿದ ಪಂಚನಾಂಮೆ ಮತ್ತು ಅಮಾನತ ಪಡೆಸಿಕೊಂಡ ಮುದ್ದೆಮಾಲು ಹಾಗೂ ಇಬ್ಬರು ಆರೋಪಿತರನ್ನು ನನ್ನ ಮುಂದೆ ಹಾಜರು ಪಡೆಸಿರುತ್ತಾರೆ. ಆರೋಪಿತರ ದಸ್ತಗಿರಿ ಕ್ರಮ ಜರುಗಿಸಿ, ಅವರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿತರನ್ನು ಮಾನ್ಯ ನ್ಯಾಯಾಲಯಕ್ಕೆ ನ್ಯಾಯಾಂಗ ಬಂಧನದ ಅರ್ಜಿಯೊಂದಿಗೆ ಹಾಜರು ಪಡೆಸಿರುತ್ತೇನೆ. ನಂತರ ಚಾಸಾ-4 ರಿಂದ 12 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ನನ್ನ ಮೇಲಾಧಿಕಾರಿ ಯವರಿಗೆ ನೀಡಿರುತ್ತೇನೆ. ಆರೋಪಿತರನ್ನು ಮತ್ತು ನನ್ನ ಮುಂದೆ ಹಾಜರು ಪಡೆಸಿದ ಮಾದರಿ ಗಸಗಸೆ ಕಡ್ಡಿಯ ಪುಡಿ ಮತ್ತು ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಹಾಗೂ ಮು.ಮಾ.1 ನ್ನು ನೋಡಿ ಗುರುತಿಸುತ್ತಾರೆ. ನಿ.ಪಿ.3 ರಲ್ಲಿ ಕಂಡು ಬರುವ ವಾಹನವನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ರ ಪರವಾಗಿ ಶ್ರೀ. ಕೆ.ಡಿ.ಆರ್., ವಕೀಲರಿಂದ**

**ಆರೋಪಿತರ ಪರ**

ನಮ್ಮ ಠಾಣೆಯಲ್ಲಿ ಠಾಣಾ ದಿನಚರಿಯನ್ನು ನಿರ್ವಹಿಸುತ್ತೇವೆ ಎಂದರೆ ಸರಿ. ಆ ದಿನ ಠಾಣೆಯಲ್ಲಿ ಸ್ವೀಕರಿಸಿದ ಮಾಹಿತಿಗಳನ್ನು ಠಾಣಾ ದಿನಚರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ನಿರ್ಧಿಷ್ಟ ಕಾಲಾವಧಿಯಲ್ಲಿ ಯಾವುದೇ ಮಾಹಿತಿ ಠಾಣೆಯಲ್ಲಿ ವರದಿ

ಆಗದಿದ್ದರೇ ಯಾವುದೇ ವಿಶೇಷ ಮಾಹಿತಿ ವರದಿ ಆಗಿರುವುದಿಲ್ಲ ಎಂದು ನಮೂದಿಸುತ್ತೇವೆ ಎಂದರೆ ಸರಿ. ನಾನು ರಾತ್ರಿ 08.00 ಗಂಟೆಗೆ ನಾನು ಠಾಣಾ ಪ್ರಭಾರವನ್ನು ಚಾಸಾ-1 ರವರಿಂದ ಪಡೆದುಕೊಂಡಿರುತ್ತೇನೆ. ಚಾಸಾ-1 ರವರು ತಮಗೆ ಬಂದ ಮಾಹಿತಿಯನ್ನು ಬರವಣಿಗೆ ಮಾಡಿಕೊಂಡ ಬಗ್ಗೆ ನನಗೆ ದೂರು ನೀಡುವ ಸಮಯದಲ್ಲಿ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಆರೋಪಿಯ ದಸ್ತಗಿರಿ ಮಾಡಿದ ಬಗ್ಗೆ ನಾನು ಮೇಲಾಧಿಕಾರಿಗಳಿಗೆ ಯಾವುದೇ ವರದಿ ನೀಡಿರುವುದಿಲ್ಲ. ನಿ.ಪಿ.2 ನ್ನು ಸಂಜೆ 6.45 ರಿಂದ 8.45 ರವರೆಗೆ ಮಾಡಲಾಗಿದೆ ಎಂದರೆ ಸರಿ. ಚಾಸಾ-1 ಮತ್ತು ಚಾಸಾ-19 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಸದರಿಯವರ ಮಾತು ಕೇಳಿ ನಾನು ಸುಳ್ಳು ದೂರನ್ನು ಸ್ವೀಕರಿಸಿ, ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:-ಇಲ್ಲ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.